◆ **ನೀವು ಮಹಿಳೆಯರ ಮತ್ತು ಅವರ ಆಂತರಿಕ ಪ್ರಪಂಚದ ಬಗ್ಗೆ ಹೆಚ್ಚಾಗಿ ಬರೆಯುತ್ತೀರಿ. ಆದರೂ 'ನಾನು ಸ್ತ್ರೀವಾದಿಯಲ್ಲ, ಮಾನವತಾವಾದಿ' ಎಂದು ಆಗಾಗ್ಗೆ ಹೇಳುವಿರಿ? ಯಾಕೆ ಹಾಗೆ ಯೋಚಿಸುತ್ತೀರಿ? ಸ್ತ್ರೀವಾದಿಯಾಗಿರುವುದು ಅಂದರೆ ಮಾನವತಾವಾದಿ ಎಂದು ನೀವು ಭಾವಿಸುವುದಿಲ್ಲವೇ?**

ನನ್ನ ಪಾತ್ರಗಳು ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ. ನನ್ನ ಪಾತ್ರಗಳ ಪ್ರಪಂಚವು ಪುರುಷರು, ಮಹಿಳೆಯರು, ಪ್ರಾಣಿಗಳು, ಪ್ರಕೃತಿ, ಸಸ್ಯಗಳು, ಸಾಗರಗಳು ಮತ್ತು ಇಡೀ ಪರಿಸರ ವ್ಯವಸ್ಥೆಯನ್ನು ಒಳಗೊಂಡಿದೆ. ನನ್ನ ಅತ್ಯಂತ ಮೆಚ್ಚುಗೆ ಪಡೆದ ಕಾದಂಬರಿಗಳಲ್ಲಿ ಒಂದಾದ 'ಮಗ್ನಮಾಟಿ' (ಪ್ರಳಯದ ನಂತರ) ಕೃತಿಯು 1999ರಲ್ಲಿ ಒಡಿಶಾದಲ್ಲಿ ಸಂಭವಿಸಿದ ಸೂಪರ್ ಸೈಕ್ಲೋನನ್ನು ಆಧರಿಸಿದೆ. ಅದರಲ್ಲಿ ಎರಡು ಪ್ರಮುಖ ಪಾತ್ರಗಳೆಂದರೆ, ಸೈಕ್ಲೋನ್ ಮತ್ತು ಭೂಮಿ. ಪುರುಷರು ಮತ್ತು ಮಹಿಳೆಯರು ಜೈವಿಕವಾಗಿ ವಿಭಿನ್ನರು ಎಂದು ನಾನು ಯಾವಾಗಲೂ ಹೇಳುತ್ತೇನೆ. ಆದರೆ, ಮನುಷ್ಯರಾಗಿ ಅವರಿಗೆ ಸಮಾನ ಹಕ್ಕುಗಳಿವೆ. ಅಲ್ಲದೆ ಫೆಮಿನಿಸಂ ಇರಲಿ, ಕಮ್ಯೂನಿಸಂ ಆಗಿರಲಿ, ಅವೆಲ್ಲ ಮಾನವತಾವಾದದ ಅಂಗಗಳೇ. ಆ ಕಾರಣದಿಂದಲೇ ನನ್ನನ್ನು ನಾನು ಮಾನವತಾವಾದಿ ಎಂದು ಹೇಳಿ ಕೊಳ್ಳುತ್ತೇನೆ.

◆ **ಒಡಿಯಾ ಸಾಹಿತ್ಯ ಪರಂಪರೆ ಮತ್ತು ಸಮಕಾಲೀನ ಲೇಖಕರ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಬಹುದೇ?**

ಒಡಿಯಾ ಸಾಹಿತ್ಯದ ವಿಷಯಕ್ಕೆ ಬಂದರೆ, ಜೀವನ ಮತ್ತು ವಾಸ್ತವದ ವಿಷಯದಲ್ಲಿ ಅಖಿಲ ಭಾರತೀಯ ದೃಷ್ಟಿಕೋನದ ರೂಪ ಮತ್ತು ಒತ್ತಡದಿಂದ ಅದು ಹೆಚ್ಚು ಪ್ರಭಾವಿತವಾಗಿದೆ. 15ನೇ ಶತಮಾನದ ಸಂತ ಕವಿ ಸರಳಾ ದಾಸ್ ಇದಕ್ಕೆ ಒಂದು ಉದಾಹರಣೆ. ಸರಳಾ ದಾಸ್ ಅವರ ಮಹಾಭಾರತವು ಒಡಿಯಾ ಸಾಹಿತ್ಯದಲ್ಲಿ ಒಂದು ಪ್ರಮುಖ ಕೃತಿಯಾಗಿದ್ದು, ಅಲ್ಲಿ ಭಾರತೀಯ ಜೀವನ ಹಾಗೂ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯ ಸಂರಚನೆಗಳು ಒಡಿಯಾದ ಸ್ಥಳೀಯ ಬಣ್ಣ ಹಾಗೂ ಸಾಂಸ್ಕೃತಿಕ ಏಕತೆಯೊಂದಿಗೆ ಚಿತ್ರಣಗೊಂಡಿವೆ.

